International Journal of Kannada Research
www.kannadajournal.com

ISSN: 2454–5813
IJKR 2020; 6(4): 110-112
© 2020 IJKR
www.kannadajournal.com
Received: 23-08-2020
Accepted: 25-09-2020

**ಡಾ. ಪದ್ಮಕರ್**
ಅಶೋಕಕುಮಾರಮಟ್ಟಿ
ಕನ್ನಡದ ಪ್ರಾಧ್ಯಾಪಕ, ಸರ್ಕಾರಿ
ಪದವೀಧರ ಕಾಲೇಜು,
ಯಾದಗಿರ್, ಕರ್ನಾಟಕ, ಭಾರತ

Corresponding Author:
**ಡಾ. ಪದ್ಮಕರ್**
ಅಶೋಕಕುಮಾರಮಟ್ಟಿ
ಕನ್ನಡದ ಪ್ರಾಧ್ಯಾಪಕ, ಸರ್ಕಾರಿ
ಪದವೀಧರ ಕಾಲೇಜು,
ಯಾದಗಿರ್, ಕರ್ನಾಟಕ, ಭಾರತ

# ಅರಿದೊಡೆ ಶರಣ, ಮರೆದೊಡೆ ಮಾನವ

**ಡಾ. ಪದ್ಮಕರ್**

ಅರಿದೊಡೆ ಶರಣ ಮರೆದೊಡೆ ಮಾನವ
ಪಾತಕನು ಹೊಲೆಯನು ನಾನೇತಕೆ ಬಾತೆ?
ಈಶನ ಶರಣರ ಕಂಡುದಾಸೀನವ ಮಾಡುವ
ದಾಸೋಹವರಿಯದ ದೂಷಕನು ನಾನಯ್ಯ
ಏಸುಬುದ್ಧಿಯ ಹೇಳಿ ಬೇಸತ್ತ ನೀ ಮನಕೇ
ಈಶ ನೀ ಸಲಹಯ್ಯ ಉರಿಲಿಂಗತಂದೆ

ಹನ್ನೆರಡನೆಯ ಶತಮಾನ ಅದೊಂದು ಸಾಮಾಜಿಕ ಕ್ರಾಂತಿಯುಗ ಜ್ಞಾನದಾಸೋಹಗಳಿಂದ ಸತ್ಯಶುದ್ಧ ಕಾಯಕಗಳಿಂದ ವ್ಯಕ್ತಿತ್ವ ವಿಕಾಸ ಮಾಡಿಕೊಂಡು ವಿಶ್ವವಿಕಾಸಕ್ಕೆ ಮಾರ್ಗದರ್ಶನ ಮಾಡಿದ ಶಿವಶರಣರ ಕಾಲವದು. ಸಕಲ ಜೀವಾತ್ಮರಿಗೆ ಲೇಸನ್ನೆ ಬಯಸಿ ವಿಶ್ವಕಲ್ಯಾಣಕ್ಕಾಗಿ ಅನುಭವಮಂಟಪ ರಚಿಸಿಕೊಂಡು ನಿತ್ಯನೂತನವಾದ ಬದುಕಿನ ಸತ್ಯ, ತತ್ತ್ವಾದರ್ಶನಗಳನ್ನು ಚರ್ಚಿಸಿ ಜನಜಾಗೃತಿ ಮಾಡಿ ಅರಿವಿನ ಮೂಲಕ ಮಾನವರನ್ನು ದೇವರನ್ನಾಗಿ ಮಾಡುವುದಕ್ಕಾಗಿ ಹಗಲಿರುಳು ಶ್ರಮಿಸಿದರು. ಮಾನವನನ್ನು ಆಧ್ಯಾತ್ಮಿಕ ತತ್ವದ ತಳಹದಿಯ ಮೇಲೆ ಪರಿಶೋಭಿಸುವಂತೆ ಮಾಡಿದ ಸುಂದರಯುಗ ಅದು ಶರಣಯುಗ, ಶರಣರು ಭಕ್ತಿಯ ಬಲದಿಂದ ಶೀಲ, ಸಂಸ್ಕೃತಿಯ ಸೌಂದರ್ಯವನ್ನುಳಿಸಿ ಬೆಳೆಸಿದ ಕಾಯಕಜೀವಿಗಳು, ವಿಶ್ವ ಸಾಮರಸ್ಯಕ್ಕೆ ಚೇತನ ಸ್ವರೂಪರಾದ ಶಿವಶರಣರ ಜೀವನ ಪ್ರತಿಯೊಬ್ಬ ಮಾನವನಿಗೂ ಆದರ್ಶಪ್ರಾಯವಾಗಿದೆ.

ಶರಣರ ಸಾಮಾಜಿಕ ಧಾರ್ಮಿಕ ಪರಿವರ್ತನೆ ಮತ್ತು ಕಾಳಜಿ ಚರಿತ್ರೆ ಮತ್ತು ಚಾರಿತ್ರ್ಯದ ದೃಷ್ಟಿಯಿಂದ ಮಹತ್ವದ್ದಾಗಿದೆ. ಮೇಲು-ಕೀಳು ಬಡವ ಬಲ್ಲಿದ, ಶ್ರೇಷ್ಠ-ಕನಿಷ್ಠ ಎಂಬ ವ್ಯತ್ಯಾಸಗಳನ್ನು ಹೋಗಲಾಡಿಸಲು ಶ್ರಮಿಸಿದ ಶರಣರು ಜಾತ್ಯಾತೀತ ಹಾಗೂ ಮತಾತೀತ ಧೋರಣೆಯಿಂದ ಸಮಾನತೆಯ ನೆಲೆಗಟ್ಟಿನ ಮೇಲೆ ಮುಕ್ತ ಸಮಾಜವನ್ನು ಕಟ್ಟಬಯಸಿದರು. ವೈಚಾರಿಕ ಮನೋಭಾವದ ಶರಣರ ಕ್ರಾಂತಿ ಪ್ರಗತಿಪರವಾದುದು. ವೈಜ್ಞಾನಿಕ ಹಾಗೂ ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ನಡೆದು ಬಂದದ್ದು, ಸರ್ವಸಮಾನತಾಭಾವದ ಮೇಲೆ ರೂಪುಗೊಂಡ ಈ ಶರಣ ಧರ್ಮ ಪರೋಪಕಾರದ ಪ್ರತೀಕವಾಗಿದೆ. ಶರಣರು ಕಾಯಕದಿಂದ ಸ್ವಾವಲಂಬಿಗಳು ಇಷ್ಟಲಿಂಗ ಧಾರಣದಿಂದ ಧಾರ್ಮಿಕ ನಿಷ್ಠೆಯುಳ್ಳವರು, ದಾಸೋಹಿಗಳು ಹಾಗೂ ಸ್ವರೂಪ ಜ್ಞಾನಿಗಳಾಗಿದ್ದರು. ಶರಣರು ತಮ್ಮ ಅನುಭಾವದ ನಿಲುವಿನಿಂದಾಗಿ ಅನುಕಂಪ ಕರುಣೆ ಚಿಂತನೆ ಹಾಗೂ ಅನುಸಂಧಾನದ ಮೂಲಕ ಆತ್ಮಸಾಕ್ಷಾತ್ಕಾರ ಮಾಡಿಕೊಂಡು ಸಮಾಜಕ್ಕೆ ಮಾರ್ಗದರ್ಶನ ಮಾಡಿದರು.

ಬಸವಣ್ಣನವರ ಪ್ರಾಮಾಣಿಕ ಮತಾತೀತ ಹಾಗೂ ಜಾತ್ಯಾತೀತ ಧೋರಣೆಯನ್ನು ಮೆಚ್ಚಿ ಜ್ಞಾನದಾಸೋಹದಲ್ಲಿ ಪಾಲ್ಗೊಂಡ ಹಲವಾರು ನಿಜಶರಣರ ವಚನಗಳು ತಮ್ಮ ಪ್ರಕಾರ ವೈಚಾರಿಕತೆಯಿಂದಾಗಿ ಗಮನ ಸೆಳೆಯುತ್ತವೆ. ಅಂಥ ವಚನಗಳಲ್ಲಿ ಉರಿಲಿಂಗದೇವರ ಪ್ರಸ್ತುತ ವಚನವೂ ಒಂದು. ಈ ವಚನವು ಸ್ವಪ್ನ ಜಾಗರಗಳಲ್ಲಿ ಶಿವಜ್ಞಾನಿಗಳಾದ ಉರಿಲಿಂಗದೇವರ ಹೃದಯಂತರಾಳದಿಂದ ಹೊರಹೊಮ್ಮಿದ ಅವಿಸ್ಮರಣೀಯ ಜ್ಞಾನಯುಕ್ತವಾದ ಪ್ರಸಾದವಾಣಿಯಾಗಿದೆ. ಜನಮಾನಸದ ಆಸರಿಕೆ-ಬೇಸರಿಕೆಗಳನ್ನು ಕಳೆದು ನಿಜಾನಂದವನ್ನು ನೀಡುವ ಉಪದೇಶವಾಣಿಯಾಗಿದೆ. ಉರಿಲಿಂಗದೇವರು ಈ ವಚನದ ಮೂಲಕ ತಮ್ಮ ಉದಾತ್ತ ತತ್ತ್ವಾದರ್ಶನಗಳನ್ನು ಪ್ರತಿಪಾದಿಸುತ್ತ ಲೋಕದ ಜನರಿಗೆ ಅವುಗಳ ಹಿರಿಮೆಯನ್ನು ತಿಳಿಹೇಳುವ ಸಂದರ್ಭದಲ್ಲಿ ಶರಣರ ಹೃದಯ ಮಮತೆಯ ಮಾತೃಹೃದಯದಂತೆ

ಕಾರುಣ್ಯಮಯವಾಗಿರುವುದನ್ನು ಕಾಣಬಹುದು. ಭವಿ-ಭಕ್ತನಾಗಬೇಕಾದರೆ ಆಧ್ಯಾತ್ಮಮಾರ್ಗದಲ್ಲಿ ಮುನ್ನಡೆದು ಸದ್ಭಾವ ಮತ್ತು ವಿಶ್ವಾಸಗಳನ್ನು ಬೆಳೆಸಿಕೊಳ್ಳುವುದು ಅವಶ್ಯಕ. ಇಂತಹ ಸಂದರ್ಭದಲ್ಲಿ ಭವಿ ಮತ್ತು ಭಕ್ತರ ನಡುವಿನ ಅಂತರವೆಂದರೆ ಅರಿವು ಮತ್ತು ಮರೆವು ಬದುಕಿನ ಸಕಲ ವಿಧಿ-ವಿಧಾನಗಳನ್ನು ಆಚಾರ-ವಿಚಾರಗಳನ್ನು ಪರಿಶುದ್ಧ ಮನಸ್ಸಿನಿಂದ ಆಕರಿಸಿಕೊಂಡು ಅರಿತು ಕೊಂಡವರೇ ಶರಣರು. ಬದುಕಿನ ಬಗ್ಗೆ ಜಿಗುಪ್ಸೆಯಿಂದ ಜಂಜಾಟ ಹಾಗೂ ಕರ್ಮ ಕಾಂಡಗಳ ಮಧ್ಯೆ ಸಿಕ್ಕಿಕೊಂಡು ನಲುಗಿ ನಿಜ ಬದುಕಿನ ಮರ್ಮವನ್ನು ಮರೆತವನೆ ಮಾನವ.

ಮಾನವನು ತನ್ನ ಜೀವನದಲ್ಲಿ ಪರಿಪೂರ್ಣತೆಯನ್ನು ಪಡೆಯುವುದು ಅರಿವಿನ ಬಲದಿಂದ ಎಂದು ಅನೇಕ ಜನ ಮಹಾತ್ಮರು ಹೇಳುತ್ತಲೆ ಬಂದಿದ್ದಾರೆ. ಅರಿವನ್ನು ಲೌಕಿಕ ಹಾಗೂ ಪಾರಮಾರ್ಥಿಕ ಎಂದು ಎರಡು ವಿಧಗಳಲ್ಲಿ ಅರ್ಥೈಸಿಕೊಳ್ಳಬಹುದು. ಸನಾತನ ಶರಣ ಸಂಸ್ಕೃತಿ, ಅರಿವೇ ಶ್ರೇಷ್ಠವೆಂದು ಭಾವಿಸಿ ಆ ನಿಟ್ಟಿನಲ್ಲಿಯೆ ಪ್ರಯತ್ನಶೀಲರಾಗಿ ಯಶಸ್ಸಿನ ಮೆಟ್ಟಿಲನ್ನು ಹತ್ತಿ ನಿಂತರು. ಮನುಷ್ಯನು ಬುದ್ಧಿ ಪ್ರಧಾನ ಜೀವಿ. ಅವನಲ್ಲಿನ ಭಕ್ತಿಯ ಸಹಾಯದಿಂದಲೇ ಅವನಿಗೆ ವಿಕಾಸ ಸಾಧ್ಯವಾಗಿದೆ. ಅರಿವಿನ ಬಲದಿಂದ ಅಂತರಂಗಾಕಾಂಕ್ಷಿಯಾಗಿರುವ ಮನುಷ್ಯ ಪಶುಗಳಿಗಿಂತ ಭಿನ್ನವಾದ ಅರಿವನ್ನು ಹೊಂದಿ ಅವುಗಳಿಂದ ಬೇರ್ಪಟ್ಟಿದ್ದಾನೆ. ಪಶುತ್ವದಿಂದ ಮನುಷ್ಯತ್ವದ ಕಡೆಗೆ ಕ್ರಮಿಸಿದ ಈ ಅರಿವೇ ಶರಣರ ದೃಷ್ಟಿಯಲ್ಲಿ ದೈವಶಕ್ತಿಯಾಗಿದೆ.

ಪರಮಾತ್ಮನು ರೂಪರಹಿತ ಅವನ ಅಂಶವಾದ ಆತ್ಮನು ಮಾನವನ ಶರೀರದಲ್ಲಿ ಅವ್ಯಕ್ತ ಸ್ವರೂಪದಲ್ಲಿರುತ್ತಾನೆ. ಆತನನ್ನು ಅರಿವಿನ ಬಲದಿಂದ ಕಾಣಬಹುದು. ಈ ನಿಜವನ್ನರಿಯದೇ ಶಿವದೂಷಣೆಯಲ್ಲಿ ತೊಡಗಿ ಪಾಪಕ್ಕೆ ಗುರಿಯಾಗುವುದಕ್ಕಿಂತ ತಮ್ಮ ಆತ್ಮೋನ್ನತಿಗೆ ಒಗ್ಗುವ ಪರಮಾತ್ಮನಲ್ಲಿ ದೃಢಭಕ್ತಿಯನ್ನಿಡುವುದೇ ಲೇಸೆನ್ನುತ್ತಾರೆ ಶರಣ ಉರಿಲಿಂಗದೇವರು. ಮಾನವ ಚಂಚಲ ಚಿತ್ತನಾಗಿ ಕಂಡ ಕಂಡಲ್ಲಿ ಪರದಾಡಿ ಏನನ್ನೂ ಸಾಧಿಸಲಾಗದೆ ಮರಿಚಿಕೆಯೊಳಗಿನ ನೀರಿಗೆ ಮಂಗ ಬೆನ್ನಟ್ಟಿ ಇನ್ನೂ ಬಾಯಾರಿ ಬಸವಳಿದು ನೀರಡಿಕೆ ನೀಗದೇ ನಿಟ್ಟುಸಿರು ಬಿಟ್ಟಂತೆ ಮಾನವ ಅಜ್ಞಾನದ ಆಗರದಲ್ಲಿ ತೊಳಲಾಡುವುದಕ್ಕಿಂತ ದೇವನೊಲುಮೆಯೆ ಅರಿವಿನ ಮಾರ್ಗ ಎಂದು ಅರಿತುಕೊಂಡು ಜೀವನ ಸಾಕ್ಷಾತ್ಕರಿಸಿಕೊಳ್ಳಬೇಕೆನ್ನುತ್ತಾರೆ ಉರಿಲಿಂಗದೇವರು.

ಉರಿಲಿಂಗದೇವರ ಈ ವಚನದಲ್ಲಿ ನಿಜಶರಣದಾಸೋಹ ವೈಖರಿಯ ಬಗೆಗೆ ಚಿಂತನೆ ನಡೆಸಲಾಗಿದೆ. ವೀರಶೈವ ಸಿದ್ಧಾಂತದಲ್ಲಿ ನಂಬಿಕೆಯಿರಿಸಿ ಅರಿಷಡ್ ವೈರಿಗಳನ್ನು ನಿಗ್ರಹಿಸಿ ಷಟ್ಸ್ಥಲಗಳ ಸೋಪಾನವನ್ನೇರಿ ಮೋಕ್ಷ ಪಡೆಯಬೇಕೆನ್ನುವವರಿಗೆ ಶರಣ ಹಾಗೂ ಶರಣ ಸಂಸ್ಕೃತಿಯ ಬಗೆಗೆ ಅಭಿಮಾನವಿರಬೇಕು. ಜೀವನ ಸಾಧಿಸಲ್ಲಿಕ್ಕಿದೆ. ಈಸಿ ಜೈಸುವ ಮಾರ್ಗದಲ್ಲಿ ನೈತಿಕತೆಯನ್ನು ಮೆರೆಯಬೇಕಿದೆ. ಎಂದರಿತವರಿಗೆ ನೂರೆಂಟು ಯೋಜನೆಗಳು ಹೊಳೆಯುತ್ತವೆ. ಶರಣ ಉರಿಲಿಂಗದೇವರು ಸಾಮಾಜಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ರಂಗಗಳಲ್ಲಿ ಹಲವಾರು ಯೋಜನೆಗಳನ್ನು ಸಾಕಾರಗೊಳಿಸಿದ್ದಾರೆ. ಸಾಮಾಜಿಕ ನ್ಯಾಯ ಎಲ್ಲರಿಗೂ ಸಿಗುವ ನಿಟ್ಟಿನಲ್ಲಿ ನ್ಯಾಯ ನಿರ್ಣಯ ಕೈಗೊಂಡಿದ್ದಾರೆ. ಎಲ್ಲರಿಗೂ ದುಡಿಯಲು ಹಚ್ಚಿ ಕಾಯಕದಿಂದಲೇ ಕೈಲಾಸವೆಂಬುದನ್ನು ಸಾರಿ ಸಾರಿ ಹೇಳಿದ್ದಾರೆ. ಶರಣರ ಈ ನೀತಿ ಸೂತ್ರಗಳನ್ನು ಅರ್ಥಮಾಡಿಕೊಳ್ಳದ ಮಾನವ ಅರಿವಿನ ಕೊರತೆಯಿಂದ ಒಳಗೊಂದು, ಹೊರಗೊಂದಾಗಿ ನಡೆಯೊಂದಾಗಿ, ನುಡಿಯೊಂದಾಗಿ ಈ ಪರಿಯ ಕಂಡು ಶರಣರು ತಮ್ಮ ವಚನಗಳಲ್ಲಿ ಮಾನವನ ಈ ನಡೆ ನುಡಿಗಳನ್ನು ಆಚಾರ-ವಿಚಾರಗಳನ್ನು ವಿಡಂಬನೆ ಮಾಡುವಂತಾಗಿದೆ.

ಪ್ರಸ್ತುತ ವಚನದಲ್ಲಿ 'ಅರಿತರೆ ಶರಣ ಮರೆತರೆ ಮಾನವ' ಎಂಬುವ ನುಡಿ ಬಹು ಮೌಲಿಕವಾದುದಾಗಿದೆ. ಒತ್ತಡಗಳ ಮಧ್ಯದಲ್ಲಿರುವ ಮನುಷ್ಯರಿಗೆ ಮರೆವು ವರವಾಗವುದಾದರೂ ಪ್ರಜ್ಞಾವಂತನ ಮರೆವು ಆಕ್ಷೇಪಕ್ಕೆ ಕಾರಣವಾಗುತ್ತದೆ. ಹೊತ್ತು ಹೊತ್ತಿಗೆ ಬಣ್ಣ ಬದಲಿಸುವ ಮನುಷ್ಯ ಗೋಸುಂಬೆ ಹೇಗೋ ಹಾಗೆ ಕ್ಷಣಕ್ಷಣಕ್ಕೆ ತಮ್ಮ ವರ್ತನೆಯಲ್ಲಿ ಬದಲಾವಣೆ ತಂದುಕೊಂಡು ಹೇಳುವುದೊಂದು ಮಾಡುವದೊಂದು, ನುಡಿಯುವದೊಂದು ನಡೆಯುವದಿನ್ನೊಂದು ಎಂಬಂತೆ ವರ್ತಿಸುವ ರೀತಿ ಶರಣರಿಗೆ ಸರ್ವತಾ ಸಲ್ಲದು ಆದ್ದರಿಂದಲೇ ಆತನನ್ನು ಶರಣ ಸಂಕುಲದಿಂದ ತೆಗೆದು ಮಾನವ ಸಂಕುಲಕ್ಕೆ ಸೇರಿಸಬೇಕೆಂಬ ಉರಿಲಿಂಗದೇವರ ಈ ವಚನದ ಆಶಯ ಅರ್ಥಪೂರ್ಣವಾಗಿದೆ.

ಇಂತ ವರ್ತನೆಯವರನ್ನು ಪಾತಕರು, ಹೊಲೆಯರು, ಎಂಬ ಕಟುನುಡಿಗಳಿಂದ ಕರೆದಿರುವುದು ಕಂಡುಬರುತ್ತದೆ. ಮನುಷ್ಯನಲ್ಲಿ ಅವಗುಣಗಳಿದ್ದಾಗ ಇಲ್ಲ ಸಲ್ಲದ ಹೊಲೆತನಗಳಿದ್ದಾಗ ಅಂಥ ವ್ಯಕ್ತಿಗಳ ಮಾತಿಗೆ ಬದುಕಿಗೆ ಹಾಗೂ ವ್ಯಕ್ತಿತ್ವಕ್ಕೆ ಬೆಲೆಯಿರಲಾರದು. ಇದನ್ನರಿತೆ ಶರಣರು, ಮರೆತ ಮಾನವ ವರ್ಗ ಮತ್ತು ಅರಿತ ಈಶನ ಶರಣರ ವರ್ಗವೆಂದು ವರ್ಗೀಕರಿಸಿ 'ಶರಣರ ಗುಣವನ್ನು ಮರಣದಲ್ಲಿ ನೋಡು' ಎಂದಿದ್ದಾರೆ. ನೀತಿತಪ್ಪಿ ನಡೆಯದೇ 'ಮರಣವೇ ಮಹಾನವಮಿ' ಎಂದವರು ಶರಣರು. ಅವರು ಮಾಡಿದ ದಾಸೋಹ ಸರ್ವಕಾಲಕ್ಕೂ ಪ್ರಸ್ತುತವಾಗಿದೆ. ಭಕ್ತನ ಅಹಂಭಾವವನ್ನು ಕಳೆದು ಮುಕ್ತಿಯನ್ನು ನೀಡುವ ಸಂಜೀವಿನಿ ದಾಸೋಹ ಇಂಥ ದಾಸೋಹವನ್ನು ದೂಷಿಸುವ ಮನಸ್ಸನ್ನು ಹೊಂದಿದ ಭವಿಗೆ ಎಷ್ಟೆ ಬುದ್ಧಿಯ ಹೇಳಿದರೂ ಅದು ಭೋರ್ಗಲ್ಲ ಮೇಲೆ ಮಳೆ ಸುರಿದಂತೆ, ಹೀಗಾಗಿ ದಾಸೋಹವನ್ನು ದೂಷಿಸುವ ಮನಸ್ಸು ಭಕ್ತನಿಗೆ ಭೂಷಣವಲ್ಲ. ಅದುದರಿಂದ ಭಕ್ತನಾದವನು ಪರಿಶುದ್ಧ ಮನಸ್ಸಿನಿಂದ ದಾಸೋಹವನ್ನು ಅರಿತುಕೊಳ್ಳುವುದು ಒಳಿತು.

ಅನ್ನದಾಸೋಹ ಹಾಗೂ ಜ್ಞಾನದಾಸೋಹಗಳಿಂದ ಗಮನ ಸೆಳೆದ ಶರಣರು ಲಿಂಗ ಪೂಜೆ ಕಾಯಕ ಹಾಗೂ ದಾಸೋಹಗಳು ಜಗಮೆಚ್ಚಲೆಂದು ತೋರಿಕೆಗೆ ಮಾಡುವಂತಹವಲ್ಲವೆಂಬುದನ್ನು ತೋರಿಸಿಕೊಟ್ಟರು. ದಾಸೋಹ ತನ್ನ ತಾನಾರೆಂದು ಅರಿತುಕೊಂಡು ತನ್ನನ್ನೆ ಪೂಜಿಸುವ ಬಯಲುಪೂಜೆ ಅದು. ಇಂಥ ಪೂಜೆಯನ್ನು ಶರಣರು ಸೂಕ್ಷ್ಮ, ಸ್ಥೂಲ, ಶರೀರ ಪ್ರಾಣ, ಭಾವಲಿಂಗಗಳನ್ನು ಪೂಜಿಸುತ್ತಾ ಆಣವ ಮಾಯಾ ಮಲತ್ರಯಗಳನ್ನು ಕಳೆದುಕೊಳ್ಳಲು ಮಾಡುವ ಲಿಂಗೋಪಾಸನೆಯೇ ದಾಸೋಹ. ಗುರು ಲಿಂಗ ಜಂಗಮಕ್ಕೆ ತನು-ಮನ-ಧನಗಳನ್ನು ಅರ್ಪಿಸಿ ಭವ ಬಂಧನವನ್ನೆ ಹೋಗಲಾಡಿಸಿಕೊಳ್ಳುವ ಶಿವಯೋಗ ಮಾರ್ಗವೇ ದಾಸೋಹ. ಹೀಗಾಗಿ ಇಂಥ ಬದುಕಿನ ಮಾರ್ಗವನ್ನು ಅರಿಯದೇ ಇದನ್ನು ದೂಷಿಸುವ ಮನುಷ್ಯನ ಮನಸ್ಸು ಬದುಕಿನ ಕೆಡುಕಿಗೆ ನಾಂದಿಯೇ ಹೊರತು ಒಳಿತಲ್ಲ. ಆದ್ದರಿಂದ ಶರಣಮಾರ್ಗದ ಪಥಿಕರು ಇದನ್ನು ಅರಿತುಕೊಂಡು ಭವ-ಬಂಧನದಿಂದ ಬಿಡಿಸಿಕೊಳ್ಳಲಾರದೆ ಬದುಕಿನ ಕಷ್ಟ-ಕಾರ್ಪಣ್ಯದಿಂದ ನೊಂದು-ಬೆಂದು ಬಸವಳಿದು ಹೋಗುವುದನ್ನು ತಪ್ಪಿಸಲು ಅಸಾಧ್ಯ. ಅರಿವಿನ ಜನ್ಮಕ್ಕೆ ಬಂದು ಮರೆವ ಪಶುಗಳನ್ನಾಗಿ ಮಾಡುವ ಬದುಕಿನ ಅನಿಷ್ಟಗಳನ್ನು ಹಾಗೂ ಅವಗುಣಗಳನ್ನು ಬಿಡಬೇಕೆಂಬುದೇ ಶರಣರ ಮನದಾಳದ

ಇಂಗಿತವಾಗಿದೆ.

'ಈಶನ ಶರಣರ ಕಂಡು ಉದಾಸೀನವ ಮಾಡಿದಡೆ' ಎಂಬ ಸಾಲು ಭವಿಗಳ ವರ್ತನೆಗೆ ಕನ್ನಡಿ ಹಿಡಿದಿದೆ. ಒಳ್ಳೆಯವರ ನಡೆನುಡಿಯಾಗಲಿ, ಉಪದೇಶವಾಗಲಿ ಕನಿಷ್ಠ ಪ್ರವೃತ್ತಿಯ ಮನುಷ್ಯನಿಗೆ ರುಚಿಸುವುದಿಲ್ಲ. ಹೆಜ್ಜೆ ಹೆಜ್ಜೆಗೂ ತಪ್ಪು ಕಂಡು ಹಿಡಿದು ದೋಷಾರೋಪ ಹೊರಿಸುವಲ್ಲಿ ಇವರ ನೀಚ ಮನಸ್ಸು ಸದಾ ಸಿದ್ಧವಾಗಿರುತ್ತದೆ. ಈಶನ ಶರಣರ ಕಂಡು ಉದಾಸೀನ ಮಾಡುವ ಪಾತಕಿಗಳು ದಯೆ, ದಾನ, ಹಾಗೂ ಧರ್ಮಗಳ ಮರ್ಮವನ್ನರಿಯದ ಇವರಿಂದ ಸಮಾಜಕ್ಕೆ ಹಾನಿಯಿದೆಯೆ ಹೊರತು ಲಾಭವೇನಿಲ್ಲ. ಇಂತಹ ಅಪನಂಬಿಕೆಯ ಮನಸ್ಸಿನವರಿಂದ ಸದೃಢ ಸಮಾಜವನ್ನು ಕಟ್ಟಲಾಗದು, ಎಲ್ಲರೂ ಸ್ವಾರ್ಥಿಗಳಾದರೆ ಲೋಕೋದ್ಧಾರವಾಗದು. ಇಂಥ ವಿಷಮ ಪರಿಸ್ಥಿತಿಯಲ್ಲಿ ಸಮಷ್ಠಿ ಕಾರ್ಯಗಳಿಗೆ ತೊಡಗಿಸಿಕೊಂಡ ಶರಣರು ಭವಿಗಳನ್ನು ಭಕ್ತರನ್ನಾಗಿ ಪರಿವರ್ತಿಸಬೇಕಾಗಿತ್ತು. ಹಾಗಾಗಿಯೇ ಅನುಭವ ಮಂಟಪದಲ್ಲಿ ನಿತ್ಯಜೀವನದ ನಿಜಾನುಭವಗಳ ತತ್ತ್ವದರ್ಶಗಳ ಮೇಲೆ ಚಿಂತನೆಯನ್ನು ನಡೆಸಿ ಆ ಚಿಂತನೆಗಳು ಸರ್ವರ ಮನಸ್ಸಿಗೆ ಹಿತವೆನಿಸಿ ಅವುಗಳಿಗೆ ಬದ್ಧರಾಗುವ ಸಂಕಲ್ಪಗಳನ್ನು ತೊಟ್ಟ ಶರಣರು ಸಮಾಜವನ್ನು ಪರಿಶುದ್ಧಗೊಳಿಸಿದರು.

ಶರಣರನ್ನು ಉದಾಸೀನ ಮನೋಭಾವದಿಂದ ನೋಡದೆ ಅವರ ದಾಸೋಹ ಮಾರ್ಗದಲ್ಲಿ ಟೀಕೆ-ಟಿಪ್ಪಣಿಗಳಿಗೆ ಆಸ್ಪದ ಕೊಡದ ಸಮಾಜೋದ್ಧಾರಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಭವಿಗಳನ್ನು ಪರೋಕ್ಷವಾಗಿ ಒತ್ತಾಯಿಸುವ ಆಶಯ ದಾಸೋಹವನರಿಯದ ದೂಷಕನು ನಾನಯ್ಯ ಎಂಬ ಉಕ್ತಿಯಲ್ಲಿ ವ್ಯಕ್ತವಾಗಿದೆ. ಶರಣರು ಬೇರೆಯವರ ಮನಸ್ಸನ್ನು ಪರಾಮರ್ಶಿಸುವುದಕ್ಕಿಂತ ಪೂರ್ವದಲ್ಲಿ ತಮ್ಮನ್ನು ತಾವು ವಿಮರ್ಶಿಸಿಕೊಂಡು ನಡೆಯಲು ಸಾಧ್ಯವಾದ, ನುಡಿಯಲು ಯೋಗ್ಯವಾದ ಮಾತುಗಳನ್ನೆ ಹೇಳುತ್ತಿದ್ದರು ಎಂಬುದಕ್ಕೆ ಪ್ರಸ್ತುತ ವಚನ ಸಾಕ್ಷಿಯಾಗಿದೆ.

ಮನುಷ್ಯ ತನ್ನ ಸದಾಚಾರ, ಸದ್ವರ್ತನೆಗಳಿಂದ ಪರಮಾತ್ಮನನ್ನು ಒಲಿಸಿಕೊಳ್ಳಬಹುದು, ಧರ್ಮದ ಕಟ್ಟಳೆಗಳನ್ನು ಮೀರದಂತೆ ನಡೆದರೆ ತನ್ನ ಅಂತರಂಗವನ್ನು ಶುದ್ಧೀಕರಿಸಿಕೊಳ್ಳಬಹುದು. ಭವಿತನವನ್ನು ಬಿಟ್ಟು ಭಕ್ತರಾಗ ಬಯಸುವವರು ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ತಕ್ಕ ನಡತೆಯನ್ನು ರೂಢಿಸಿಕೊಳ್ಳಬೇಕು. ಇದನ್ನು ಹೊರತುಪಡಿಸಿ ಭವಿತನದಿಂದ ನಿಜಶರಣನ ನಿಂದನೆಗೆ ಮೊದಲಿಟ್ಟರೆ ಭಕ್ತನ ಪರಿ ಡಾಂಭಿಕತೆ ಹಾಗೂ ಆತ್ಮವಂಚನೆಯಲ್ಲಿ ಪ್ರಾರಂಭವಾಗಿ ಆಷ್ಯಾಢಭೂತಿತನದಲ್ಲಿ ಮುಕ್ತಾಯವಾಗುತ್ತದೆ. ಇಂಥ ಆತ್ಮವಂಚಕ ವೇಷಧಾರಿಗಳಿಗೆ ಪರಮಾತ್ಮನು ಒಲಿಯುವುದಿಲ್ಲ.

ಶಿವಾಚಾರದಲ್ಲಿ ಮುಖ್ಯವಾಗಿ ಜಾತಿ, ಮತ, ಪಂಥಗಳ ಭೇದವನ್ನು ಮೀರಿ ಲಿಂಗಾರ್ಚನೆಯ ಅರಿವನ್ನು ಮೂಡಿಸಿಕೊಂಡು ನಡೆಯುವವರೆಲ್ಲರೂ ಕುಲಜರು. ಜಾತಿ, ಮತ, ಪಂಥಗಳ ಭಿನ್ನತೆಯ ದಾರಿಯು ವಿಭಿನ್ನ ನೆಲೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಆಚಾರ ಹೀನರಾಗಿ ಮರೆವಿನ ಪಾಶಕ್ಕೆ ಮೋಹಿತರಾಗಿ ಶಿವಾಚಾರಕ್ಕೆ ಸಲ್ಲರು.

ಸಾಮಾಜಿಕ ಸಮಾನತೆಯ ಹರಿಕಾರರಾದ ಶರಣರು, ಅಂತರಂಗ ಸಾಧಕರು ಬಹಿರಂಗ ಸುಧಾರಕರು ಆಗಿದ್ದರು, ಇದಕ್ಕೆ ಅವರ ವಚನಗಳೇ ಸಾಕ್ಷಿ. ಸಮಾಜ ಜೀವಿಗಳು ಸುಸಂಸ್ಕೃತರು ಧರ್ಮ ಪಾರಾಯಣರು ಹಾಗೂ ಸಚ್ಚಾರಿತ್ರ್ಯಶೀಲರಾಗಿರಬೇಕೆಂಬುದು ಶರಣರ ಅಂತಃಕರಣವಾಗಿತ್ತು. ಶರಣರು ವ್ಯಕ್ತಿ ಮತ್ತು ಸಮಾಜದ ಪರಸ್ಪರ ಹಿತಸಂಬಂಧವನ್ನು ಅರಿತವರಾಗಿದ್ದರು. ಹಾಗಾಗಿಯೇ ನಾಡಿನ ಉದ್ದಗಲ್ಲಕ್ಕೂ ಪ್ರಾಮಾಣಿಕವೂ. ಪರಿಶುದ್ಧವೂ ಹಾಗೂ ಪ್ರಶಾಂತವಾದ ಸಾಮಾಜಿಕ ಪರಿಸರವನ್ನು ಬೆಳೆಸಿಕೊಂಡು ಬಂದಿರುವುದು ಶ್ಲಾಘನೀಯ. ಅಂತೆಯೇ ಲೋಕದ ಹೊಲಸು ಕೊಳೆ, ಮೌಢ್ಯ ಹಾಗೂ ಶೋಷಣೆಯನ್ನು ನಿವಾರಿಸಿ ಜನಮನವನ್ನು ಪರಿಶುದ್ಧಗೊಳಿಸಿದರು. ವ್ಯಕ್ತಿತನ್ನ ದೋಷಗಳನ್ನು ತಿದ್ದಿಕೊಳ್ಳದೆ ಅನ್ಯರ ಸುಧಾರಣೆಗೆ ಹಾತೊರೆಯುತ್ತಾನೆ. ಮತ್ತು ಡಾಂಭಿಕತೆಯಿಂದ ಸಮಾಜಕ್ಕೆ ಅಪಾಯವನ್ನುಂಟು ಮಾಡುತ್ತಾನೆ. ಇಂತಹ ಸಂದರ್ಭಗಳಲ್ಲಿ ನಮ್ಮ ನಮ್ಮಲಿಯೇ ಕುಂದು ಕೊರತೆಗಳನ್ನು ಹೋಗಲಾಡಿಸಿಕೊಳ್ಳಲು ಎಚ್ಚರವಹಿಸಿ ನಮ್ಮ ಮನಸ್ಸನ್ನು ಶುದ್ಧಿಗೊಳಿಸಿಕೊಂಡ ನಂತರವೆ ಲೋಕ ಜೀವನದ ಸುಧಾರಣೆಗೆ ತೊಡಗುವುದು ಹಿತಕರವೆಂದರು ಶರಣರು.

ಸಮಕಾಲೀನ ಜೀವನವು ಅನಾಚಾರ, ಅಂಧಾನುಕರುಣೆಗಳಿಗೆ ಬಲಿಯಾಗಿದ್ದರಿಂದ ಅದನ್ನು ನಿರ್ಮೂಲನೆ ಮಾಡಲು ಶರಣ ಜೀವಿಗಳು ಮನಃಪೂರ್ವಕವಾಗಿ ಪ್ರಯತ್ನಿಸಿದರು. ಶರಣರು ಸಮಾಜ ಸುಧಾರಣೆಯ ನಿಲುವನ್ನು ತಳೆದುದರಿಂದಲೇ ಸಾಮಾಜಿಕ ಜಾಗೃತಿ ಉಂಟಾಯಿತು. ಪ್ರತಿಯೊಬ್ಬರ ಮನಸ್ಸಿನಲ್ಲಿ ಸಮಾಜ ಸುಧಾರಣೆಯ ಕಳಕಳಿಯು ಮೂಡಿತು ಹಾಗೂ ವ್ಯಕ್ತಿ ವ್ಯಕ್ತಿಗಳ ಅಂತರಂಗ ವೀಕ್ಷಣೆಗೆ ಪ್ರೇರಣೆಯಾಯಿತು. ಇಂಥ ವಚನಗಳ ವಿಶ್ಲೇಷಣೆಯಿಂದ ನೀತಿ ಸಂಹಿತೆಯ ಜೊತೆಗೆ ಬುದ್ಧಿಭಾವಗಳು ಹರಿತವಾಗುವುದರಲ್ಲಿ ಯಾವ ಸಂದೇಹವಿಲ್ಲ.

**ಪರಾಮರ್ಶನ ಗ್ರಂಥಗಳು**


| | ಪುಸ್ತಕದ ಹೆಸರು | ಲೇಖಕರ ಹೆಸರು | ಪ್ರಕಾಶನಗೊಂಡ ವರ್ಷ |
|---|---|---|---|
| 1. | ದಲಿತ ವರ್ಗದ ಶರಣರು ಮತ್ತು ಶರಣೆಯರು | ಡಾ.ಮ.ನ.ಜವರಯ್ಯ | 1997 |
| 2. | ವಚನ ಸಾಹಿತ್ಯ | ಡಾ.ಪಿ.ವಿ.ನಾರಾಯಣ | 1997 |
| 3. | ಬಸವಯುಗದ ಶಿವಶರಣರು | ಲಲ್ಲೇಶ್ವರಿ ಮೂಗಿ | 1997 |
| 4. | ವಚನ ಚಳುವಳಿ | ಡಾ.ಬಸವರಾಜ ಸಬರದ | 1992 |
| 5. | ದೀಪದ ಕಲಿಯರ ಕಾವ್ಯ | ಡಾ.ಎಸ್.ವಿದ್ಯಾಶಂಕರ | 1974 |
| 6. | ವಚನಾನುಶೀಲನ | ಡಾ.ಎಸ್.ವಿದ್ಯಾಶಂಕರ | 1989 |
| 7. | ಉರಿಲಿಂಗಪೆದ್ದಿಗಳ ವಚನಗಳು | ಡಾ.ಎಚ್.ಪಿ.ಮಲ್ಲೇದೇವರು | 1975 |
| 8. | ಸಂಕೀರ್ಣ ವಚನ ಸಂಪುಟ | ಡಾ.ಎಂ.ಎಂ ಕಲಬುರಗಿ | 1993 |
| 9. | ಅರಿವು ಆಚಾರ | ಬಿ.ಮಹಾದೇವಪ್ಪ | 1998 |
| 10. | ಶರಣ ಸಾಹಿತ್ಯ ಸಮೀಕ್ಷೆ | ದೊಡ್ಡ ಸ್ವಾಮಿ | 1988 |
| 11. | ವಚನಸಾಹಿತ್ಯ ವೈಚಾರಿಕ ಅಧ್ಯಯನ | ಡಾ.ಎಚ್.ತಿಪ್ಪೇರುದ್ರ ಸ್ವಾಮಿ | 1978 |
| 12. | ಶರಣ ಚರಿತಾಮೃತ | ಡಾ.ಸಿದ್ದಯ್ಯ ಪುರಾಣಿಕ | 1964 |
| 13. | ವಚನ ಅಧ್ಯಯನ | ಡಾ.ವೀರಣ್ಣ ರಾಜೂರ | 1994 |